ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿಗಳ ನ್ಯಾಯಾಲಯ, ಮುಳಬಾಗಿಲು

ಉಪಸ್ಥಿತರುಃ ಶ್ರೀಮತಿ ಸುಜಾತ ಸುವರ್ಣ ಬಿ. ಬಿ.ಕಾಂ.,ಎಲ್ಎಲ್ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ಮುಳಬಾಗಿಲು

**ಸಿಸಿ. ನಂ.೮೫/೨೦೧೮**

ದಿನಾಂಕ: ೨೬ನೇ ಫೆಬ್ರವರಿ – ೨೦೨೧

ಪಿರ್ಯಾದುದಾರರು : ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆ
ಮುಳಬಾಗಿಲು

(ಸಹಾಯಕ ಸರ್ಕಾರಿ ಅಭಿಯೋಜಕರು)

:: ವಿರುದ್ಧ ::

ಆರೋಪಿತರು : ಶ್ರೀ. ಕೃಷ್ಣಮೂರ್ತಿ, ೪೩ ವರ್ಷ,
ಬಿನ್ ಕೃಷ್ಣಯ್ಯಶೆಟ್ಟಿ,
ವಾಸಃ ಅಪ್ಪೇನಹಳ್ಳಿ ಗ್ರಾಮ,
ತಾಯಲೂರು ಹೋಬಳಿ,
ಮುಳಬಾಗಿಲು ತಾಲ್ಲೂಕು.

(ಆರೋಪಿತರ ಪರವಾಗಿ ಶ್ರೀ.ಕೆ.ಆರ್.ಆರ್-ವಕೀಲರು)

ಪ್ರಸ್ತಾವಿತ ಆರೋಪಿ/ ಎದುರುದಾರರು : ಡಿ.ಎನ್. ರೆಡ್ಡಪ್ಪ, ೩೩ ವರ್ಷ,
ಬಿನ್ ನಾರಾಯಣಪ್ಪ,
ರೆಡ್ಡಿ ವೈನ್ಸ್ ಮಾಲೀಕರು,
ತಾಯಲೂರು ಗ್ರಾಮ,
ಮುಳಬಾಗಿಲು ತಾಲ್ಲೂಕು,

## ಅರ್ಜಿದಾರರು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ ೩೧೯ ರನ್ವಯ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶ

ಸಹಾಯಕ ಸರ್ಕಾರಿ ಅಭಿಯೋಜಕರು ದಂಡ ಪಕ್ರಿಯ ಸಂಹಿತೆ ೩೧೯ರಲ್ಲಿ ಅರ್ಜಿಯನ್ನು ಸಲ್ಲಿಸಿ ಎದುರುದಾರರಾದ ರೆಡ್ಡಿ ವೈನ್ಸ್ ಮಾಲೀಕರು, ತಾಯಲೂರು ಗ್ರಾಮ, ಮುಳಬಾಗಿಲು ತಾಲ್ಲೂಕು ಇವರನ್ನು ದೋಷಾರೋಪಣಾ ಪಟ್ಟಿಯಲ್ಲಿ ಸೇರಿಸಬೇಕು ಎಂದು ಕೋರಿಕೊಂಡಿರುತ್ತಾರೆ.

೨. ಈ ನ್ಯಾಯಾಲಯವು ಅರ್ಜಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯವು ರೆಡ್ಡಿ ವೈನ್ಸ್ ಮಾಲೀಕರಿಗೆ ನೋಟೀಸ್ಸನ್ನು ಕಳುಹಿಸಿದ್ದು ಆಗ ರೆಡ್ಡಿ ವೈನ್ಸ್ ಮಾಲೀಕರ ಪರವಾಗಿ ಶ್ರೀ ಎನ್.ಎಸ್. ವಕೀಲರು ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ವಕಲಾತ್‌ನಾಮವನ್ನು ಸಲ್ಲಿಸಿದ್ದು, ಆ ವಕಲಾತ್‌ನಾಮದಲ್ಲಿ ಡಿ.ಎನ್.ರೆಡ್ಡಪ್ಪ ಬಿನ್ ನಾರಾಯಣಪ್ಪ ಇವರು ರೆಡ್ಡಿ ವೈನ್ಸ್‌ನ ಮಾಲೀಕರು ಎಂದು ನಮೂದು ಇರುತ್ತದೆ. ತದನಂತರ ಪ್ರಸ್ತಾವಿತ ಆರೋಪಿ/ಎದುರುದಾರರ ಪರವಾಗಿ ತಕರಾರನ್ನು ಸಲ್ಲಿಸಿರುತ್ತಾರೆ.

೩. ತಕರಾರಿನ ಸಾರಾಂಶ ಈ ಕೆಳಗಿನಂತಿರುತ್ತದೆ.

ಆರೋಪಿಯು ಪ್ರಾಸ್ತಾವಿತ ಆರೋಪಿ/ಎದುರುದಾರರ ಮದ್ಯದ ಅಂಗಡಿಯಿಂದ ಯಾವುದೇ ಮದ್ಯದ ಬಾಟಲುಗಳನ್ನು ಖರೀದಿ ಮಾಡಿಕೊಂಡು ಹೋಗಿರುವುದಿಲ್ಲ, ಅವರು ಯಾವುತ್ತು ಆರೋಪಿಯನ್ನು ನೋಡಿರುವುದಿಲ್ಲ, ಕೇವಲ ಆರೋಪಿಯ ಹೇಳಿಕೆಯ ಮೇಲೆಗೆ ಪೊಲೀಸರು ಸುಳ್ಳು ದೂರನ್ನು ದಾಖಲಿಸಿಕೊಂಡಿರುತ್ತಾರೆ. ಕಾನೂನಿನಡಿಯಲ್ಲಿ ಅದಕ್ಕೆ ಯಾವುದೇ ಮೌಲ್ಯವಿರುವುದಿಲ್ಲ, ಆರೋಪಿಯು ಎದುರುದಾರರ ಊರಿನವರು ಕೂಡ ಆಗಿರುವುದಿಲ್ಲ, ಎದುರುದಾರರು ಪೊಲೀಸರು ಕೇವಲ ಕೇಳಿಕೆಯ ಸಾಕ್ಷ್ಯವನ್ನು

ಪರಿಗಣಿಸಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ವಸ್ತುಸ್ಥಿತಿಯಲ್ಲಾಗಿಲೀ ಕಾನೂನಿನಡಿಯಲ್ಲಾಗಲೀ ಊರ್ಜಿತವಾಗಿರುವುದಿಲ್ಲ.

೪. ವಾದವನ್ನು ಆಲಿಸಲಾಗಿಯಿತು.

೫. ಈ ನ್ಯಾಯಾಲಯದ ಗಮನಕ್ಕೆ ಉದ್ಭವಿಸುವ ಅಂಶಗಳೇನೆಂದರೆ.

೧. ಅಭಿಯೋಜನೆಯವರು ಅರ್ಜಿಯಲ್ಲಿ ನಮೂದಿಸಿರುವಂತಹ ರೆಡ್ಡಿ ವೈನ್ಸ್ ಮಾಲೀಕರನ್ನು ಆರೋಪಿತರನ್ನಾಗಿ ಪರಿಗಣಿಸುವ ಅವಶ್ಯಕತೆ ಇದೆ ಎಂದು ಸಕಾರಣ ನೀಡಿರುತ್ತಾರೆಯೇ?

೨. ಯಾವ ಆದೇಶ?

೬. ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಿದ್ದೇನೆ:

| | | |
|---|---|---|
| ಅಂಶ- ೧ | : | ಸಕಾರಾತ್ಮಕವಾಗಿ |
| ಅಂಶ- ೨ | : | ಅಂತಿಮ ಆದೇಶದಂತೆ ಈ ಕೆಳಗೆ ಕಾಣಿಸಿರುವ |

## ಕಾ ರ ಣ ಗ ಳು

೭. ಅಂಶ-೧ :- ಅಭಿಯೋಜನೆಯವರು ತಮ್ಮ ಅರ್ಜಿಯಲ್ಲಿ ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ ೧೬೨/೨೦೧೭ರಲ್ಲಿ ಆರೋಪಿ ವಿರುದ್ಧ ದೋಷಾರೋಪಣವನ್ನು ಸಲ್ಲಿಸಿದ್ದು ದಿನಾಂಕ ೧೯.೦೭.೨೦೧೭ರಂದು ರಾತ್ರಿ ೧೦:೦೦ ಗಂಟೆಯ ಸಮಯದಲ್ಲಿ ಸಿಪಿಐ ಮುಳಬಾಗಿಲು ರವರ ಮೆಮೊದಂತೆ ಅಪ್ಪೇನಹಳ್ಳಿ ಗ್ರಾಮದ ಕೃಷ್ಣಮೂರ್ತಿ ಬಿನ್ ಕನ್ನಯಶೆಟ್ಟ ಇವರ ತೋಟದ ಮನೆಯಲ್ಲಿ ಅಕ್ರಮವಾಗಿ ಮದ್ಯಮಾರಾಟ

ಮಾಡುತ್ತಿರುವುದಾಗಿ ಬಂದ ದೂರಿನ ಮೇರೆಗೆ ತನ್ನ ಸಿಬ್ಬಂದಿ ಮತ್ತು ಪಂಚರರೊಂದಿಗೆ ದಾಳಿ ಮಾಡಿದಾಗ ಆರೋಪಿ ಕೃಷ್ಣಮೂರ್ತಿ ಓಡಿಹೋಗಿದ್ದು, ಮನೆಯಲ್ಲಿ ಪರಿಶೀಲಿಸಲಾಗಿ ಮಂಚದ ಕೆಳಗಡೆ ಒಂದು ಕಾಟನ್ ಬಾಕ್ಸ್‌ನಲ್ಲಿ ೯೦ ಎಂ.ಎಲ್‌ನ ೩೬ ರಾಜಾ ವಿಸ್ಕಿ ಟೆಟ್ರಾ ಪ್ಯಾಕ್, ೯ ಪಿ.ಎಂ. ಬ್ರಾಂಡ್‌ನ ೧೮೦ ಎಂ.ಎಲ್.ನ ೫ ಟೆಟ್ರಾ ಪಾಕೆಟ್, ಓಟಿ ೧೮೦ ಎಂ.ಎಲ್.ನ ೬ ಪಾಕೆಟ್ ಇವುಗಳನ್ನು ಪಶಪಡಿಸಿಕೊಂಡು, ಸ್ಥಳದಲ್ಲಿ ಮಹಜರ್ ಜರುಗಿಸಿ ನಂತರ ತಿಳಿಯಲಾಗಿ ಸದರಿ ಜಮೀನಿನ ಮಾಲಿಕರಾದ ಕೃಷ್ಣಮೂರ್ತಿರವರು ತಾಯಲೂರು ಗ್ರಾಮದ ರೆಡ್ಡಿ ವೈನ್ಸ್ ಅಂಗಡಿಯಿಂದ ಸದರಿ ಮದ್ಯವನ್ನು ತಂದು ಅಕ್ರಮವಾಗಿ ಮಾರಾಟ ಮಾಡಿತ್ತಿರುವುದಾಗಿ ತಿಳಿದು ಬಂದಿರುತ್ತೆ. ಎಂಬುದಾಗಿ ಚಾಸಾ-೧ರವರ ದೂರು ಇದ್ದು, ಚಾಸಾ-೧ರವರ ಸದರಿ ವರದಿಯಂತೆ ಕೃಷ್ಣಮೂರ್ತಿ ಮತ್ತು ತಾಯಲೂರು ಗ್ರಾಮದ ರೆಡ್ಡಿ ವೈನ್ಸ್ ಮಾಲೀಕರ ವಿರುದ್ಧ ಪ್ರ.ವ.ವರಧಿಯನ್ನು ಚಾಸಾ-೯ ರವರು ದಾಖಲಿಸಿಕೊಂಡಿರುತ್ತಾರೆ ಎಂದು ನಮೂದು ಮಾಡಿರುತ್ತಾರೆ, ಆದ್ದರಿಂದ ರೆಡ್ಡಿ ವೈನ್ಸ್ ಮಾಲೀಕರನ್ನು ೨ನೇ ಆರೋಪಿಯಾಗಿ ಸೇರಿಸಬೇಕೆಂದು ಕೋರಿಕೊಂಡಿರುತ್ತಾರೆ.

೮. ಈ ಪ್ರಕರಣದಲ್ಲಿ ಈಗಾಗಲೆ ಚಾಸಾ-೧ರವರ ವಿಚಾರಣೆಯಾಗಿದ್ದು ಅವರು ಸಿ.ಪಿ.ಐ.ಯಾಗಿದ್ದು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ ಅಪ್ಪೇನಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು ಹಾಗೂ ಅವರು ಆರೋಪಿಯು ಅವುಗಳನ್ನು ತಾಯಲೂರು ರೆಡ್ಡಿ ವೈನ್ಸ್ ಮಾಲೀಕ ತಾಯಲೂರು, ಮುಳಬಾಗಿಲು ಇವರಿಂದ ಅಕ್ರಮ ಮಾರಾಟ ಮಾಡಲು ತಂದು ಇರಿಸಿದ್ದರೆಂದು ತಿಳಿದು ಬಂದಿದ್ದು ಅವುಗಳನ್ನು ಅವರು ಸುಮಾರು ೬:೪೫ ರಿಂದ ೮:೩೦ರ ಅವಧಿಯಲ್ಲಿ ವಶಪಡಿಸಿಕೊಂಡಿದ್ದಾರೆ ಎಂದು,

ಅವುಗಳಿಂದ ತಲಾ ಒಂದೊಂದು ಪ್ಯಾಕೇಟ್‌ಗಳನ್ನು ರಾಸಾಯನಿಕ ಪರೀಕ್ಷೆಯ ಸಲುವಾಗಿ ತೆಗೆದು ಶೀಲು ಮಾಡಿ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಮಾಲುಗಳೊಂದಿಗೆ ಠಾಣೆಗೆ ಬಂದು ಸರ್ಕಾರದ ಪರವಾಗಿ ದೂರನ್ನು ಆರೋಪಿ ಮತ್ತು ರೆಡ್ಡಿ ವೈನ್ಸ್ ಮಾಲೀಕರ ಮೇಲೆ ನೀಡಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

೬. ದಂಡ ಪ್ರಕ್ರಿಯಾ ಸಂಹಿತೆ ೩೧೯ – ಅಪರಾಧದ ಬಗ್ಗೆ ದೋಷಿಗಳಿಂದು ಕಂಡು ಬರುವ ಇತರ ವ್ಯಕ್ತಿಗಳ ವಿರುದ್ಧ ವ್ಯವಹರಣೆ ನಡೆಸುವ ಅಧಿಕಾರ

೧. ಒಂದು ಅಪರಾಧ ವಿಚಾರಣೆ ಅಥವಾ ಆರೋಪ ವಿಚಾರಣೆಯ ಕ್ರಮದಲ್ಲಿ, ಆಪಾಧಿತನಲ್ಲದ ಯಾವನೇ ವ್ಯಕ್ತಿಯು ಆ ಯಾವುದೇ ಅಪರಾಧ ಮಾಡಿರುವನೆಂದು ಮತ್ತು ಅದಕ್ಕಾಗಿ ಅಂಥ ವ್ಯಕ್ತಿಯನ್ನು ಆಪಾದಿತನೊಂದಿಗೆ ಒಟ್ಟಿಗೆ ನ್ಯಾಯಾಲಯವು ಅಂಥ ವ್ಯಕ್ತಿಯ ವಿರುದ್ಧ ಅವನು ಮಾಡಿರುವುದಾಗಿ ಕಂಡು ಬರುವ ಅಪರಾಧಕ್ಕಾಗಿ ವ್ಯವಹರಣೆ ನಡೆಸಬಹುದು.

೨. ಅಂಥ ವ್ಯಕ್ತಿಯು ನ್ಯಾಯಾಲಯಕ್ಕೆ ಹಾಜರಾಗದಿದ್ದಾಗ, ಮೇಲೆ ಹೇಳಿದ ಉದ್ದೇಶಕ್ಕಾಗಿ, ಮೊಕದ್ದಮೆಯ ಪರಿಸ್ಥಿತಿಗಳು ಅಗತ್ಯಪಡಿಸಬಹುದಾದಂತೆ, ಅವನನ್ನು ದಸ್ತಗಿರಿ ಮಾಡಬಹುದು ಅಥವಾ ಸಮನು ಮಾಡಬಹುದು.

೩. ದಸ್ತಗಿರಿಯಲ್ಲಲ್ಲದೆ ಅಥವಾ ಸಮನು ಮೇಲಲ್ಲದೆ ನ್ಯಾಯಾಲಯದಲ್ಲಿ ಹಾಜರಾಗುವ ಯಾವನೇ ವ್ಯಕ್ತಿಯನ್ನು, ಅವನು ಮಾಡಿರುವದಾಗಿ ಕಂಡುಬರುವ ಅಪರಾಧದ ವಿಚಾರಣೆಯ ಅಥವಾ ಆರೋಪ ವಿಚಾರಣೆಯ ಉದ್ದೇಶಕ್ಕಾಗಿ ಅಂಥ ನ್ಯಾಯಾಲಯವು ತಡೆಹಿಡಿದಿರಿಸಬಹುದು.

೪. (೧) ನೇ ಒಳಪ್ರಕರಣದ ಮೇರೆಗೆ ಯಾವನೇ ವ್ಯಕ್ತಿಯ ವಿರುದ್ಧ ನ್ಯಾಯಾಲಯವು ವ್ಯವಹರಣೆ ನಡೆಸಿದರೆ, ಆಗ-

(ಎ) ಅಂಥ ವ್ಯಕ್ತಿಯ ಬಗೆಗಿನ ವ್ಯವಹರಣೆಗಳನ್ನು ಹೊಸದಾಗಿ ಪ್ರಾಂಭಿಸತಕ್ಕುದು ಮತ್ತು ಸಾಕ್ಷಿಗಳನ್ನು ಪುನಃ ವಿಚಾರಣೆ ಮಾಡತಕ್ಕುದು

(ಬಿ)(ಎ) ಖಂಡದ ಉಪಬಂಧಗಳಿಗೊಳಪಟ್ಟು, ಯಾವ ಅಪರಾಧದ ಬಗ್ಗೆ ವಿಚಾರಣೆ ಅಥವಾ ಆರೋಪ ವಿಚಾರಣೆ ಪ್ರಾರಂಭವಾಯಿತೋ ಅಪರಾಧವನುನ ಗಮನಿಸಿ ನ್ಯಾಯಾಲಯವು ಕ್ರಮ ತೆಗೆದುಕೊಂಡಾಗಲೇ ಅಂಥ ವ್ಯಕ್ತಿಯು ಆಪಾದಿತನಾಗಿದ್ದನೆಂಬಂತೆ ಮೊಕದ್ದಮೆಯು ಮುಂದುವರಿಯಬಹುದು.

೧೦. ಅರ್ಜಿಯನ್ನು ಸಲ್ಲಿಸಿದ ನಂತರ ಈ ಅರ್ಜಿಯು ದಾಖಲಾದ ನಂತರ ರೆಡ್ಡಿ ವೈನ್ಸ್ ಮಾಲೀಕರಿಗೆ ನೋಟೀಸನ್ನು ಕಳುಹಿಸಿದ್ದು, ಅವರು ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಿ ತಮ್ಮ ತಕರಾರಿನಲ್ಲಿ ೧ನೇ ಆರೋಪಿ ಅವರಿಗೆ ಪರಿಚಯ ಇರುವುದಿಲ್ಲವೆಂದು, ೧ನೇ ಆರೋಪಿ ಯಾವುದೆ ಮದ್ಯವನ್ನು ಖರೀದಿ ಮಾಡಿರುವುದಿಲ್ಲವೆಂದು, ಯಾವುತ್ತು ಕೂಡ ಅವರು ಕೃಷ್ಣಮೂರ್ತಿಯವರನ್ನು ನೋಡಿರುವುದಿಲ್ಲವೆಂದು, ಕೇವಲ ೧ನೇ ಆರೋಪಿಯು ನೀಡಿದಂತಹ ಹೇಳಿಕೆಯ ಮೇಲೆ ಅವರ ಮೇಲೆ ಪೊಲೀಸರು ಸುಳ್ಳು ಪ್ರಕರಣವನ್ನು ನಿರ್ಣಯಿಸಿರುತ್ತಾರೆ ಎಂದು ಅಭಿಯೋಜಕರು ಅವರ ಮೇಲೆ ಹೇಳಿಕೆಯ ಮಾತನ್ನು ಕೇಳಿಕೊಂಡು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದು ಆದ್ದರಿಂದ ಅಭಿಯೋಜಕರು ಸಲ್ಲಿಸಿರುವ ಅರ್ಜಿಯು ಊರ್ಜಿತವಾಗಿರುವುದಿಲ್ಲವೆಂದು ಖಂಡನೆಯನ್ನು ತೆಗೆದುಕೊಂಡಿರುತ್ತಾರೆ.

೧೧. ನಿಪಿ-೧ ದಾಖಲಾತಿಯನ್ನು ಗಮನಿಸಿದಾಗ ಆ ದಾಖಲಾತಿಯಲ್ಲಿ ೧ನೇ ಆರೋಪಿ ಕೃಷ್ಣಮೂರ್ತಿ ಇವರಿಗೆ ರೆಡ್ಡಿ ವೈನ್ಸ್ ಮಾಲೀಕರು ಅಕ್ರಮವಾಗಿ ಮದ್ಯ ಸರಬರಾಜು ಮಾಡಿದ್ದು ಅದನ್ನು ಆತನ ಅವರ ಮನೆಯಲ್ಲಿ ಮಾರಾಟ

ಮಾಡುತ್ತಿದ್ದರು ಎಂದು ದೂರು ನೀಡಿರುವುದಾಗಿರುತ್ತದೆ. ಎದುರುದಾರರ ಪರ ವಕೀಲರು ವಾದವನ್ನು ಮಂಡಿಸುವ ಸಮಯದಲ್ಲಿ ಐಎಲ್‌ಆರ್ ೨೦೧೬ ಕರ್ನಾಟಕ ೩೨೬೦ನ್ನು ಹಾಜರುಪಡಿಸಿರುತ್ತಾರೆ. ಈ ಪ್ರಕರಣದಲ್ಲಿ ಚಾಸಾ-೧ರವರು ಅರಕ್ಷಕ ವೃತ್ತ ನೀರೀಕ್ಷಕರಾಗಿದ್ದು ಅವರು ತಮ್ಮ ಮುಖ್ಯವಿಚಾರಣೆಯಲ್ಲಿ ಆರೋಪಿಯೂ ಮದ್ಯವನ್ನು ತಾಯಲೂರು ರೆಡ್ಡಿ ವೈನ್ ಮಾಲೀಕರಿಂದ ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಹಾಗೂ ಅವರು ನೀಡಿದಂತಹ ನಿಪಿ-೧ ದಾಖಲಾತಿಯಲ್ಲಿ ಕೂಡ ಅವರು ನಿಖರವಾಗಿ ಮದ್ಯವನ್ನು ಅಕ್ರಮಾಗಿ ಸರಬರಾಜು ಮಾಡಿದಂತಹ ತಾಯಲೂರು ರೆಡ್ಡಿ ವೈನ್ಸ್ ಮಾಲೀಕರ ವಿರುದ್ಧ ಕಲಂ ೩೨, ೩೪ರಡಿಯಲ್ಲಿ ಪ್ರಕರಣ ದಾಖಲಿಸಬೇಕು ಎಂದು ಸರ್ಕಾರದ ಪರವಾಗಿ ದೂರು ನೀಡಿದ್ದು ಕಂಡು ಬರುತ್ತದೆ.

೧೨. ಪಿಡಬ್ಲ್ಯೂ-೧ರವರು ಸರ್ಕಾರಿ ನೌಕರರಾಗಿದ್ದು ಈ ಹಂತದಲ್ಲಿ ಸಾಕ್ಷ್ಯ ವಿಚಾರಣೆಯಾಗದೆ ತಾಯಲೂರು ರೆಡ್ಡಿ ವೈನ್ಸ್ ಮಾಲೀಕರು ಈ ಪ್ರಕರಣದಲ್ಲಿ ಭಾಗಿಯಾಗಿಲ್ಲಿವೆಂದು ಅಥವಾ ಭಾಗಿಯಾಗಿದ್ದಾರೆಂದು ಕೂಡ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ತನಿಖಾಧಿಕಾರಿಯವರು ಕೇವಲ ತಾಯಲೂರು ರೆಡ್ಡಿ ವೈನ್ಸ್ ಮಾಲೀಕರು ಪ್ರಕರಣದಲ್ಲಿ ಭಾಗಿಯಾಗಿಲ್ಲವೆಂದು ದೋಷಾರೋಪಣೆಯನ್ನು ಸಲ್ಲಿಸಿರುತ್ತಾರೆ. ಚಾಸಾ-೧ರವರ ಸರ್ಕಾರಿ ತರ್ಫೆ ದೂರನ್ನು ನೀಡಿದ್ದು ಅವರು ಆ ರೀತಿ ರೆಡ್ಡಿ ವೈನ್ಸ್ ಮಾಲೀಕರ ವಿರುದ್ಧ ಕೂಡ ದೂರನ್ನು ನೀಡಲು ಕಾರಣವೇನು ಎನ್ನುವ ಕುರಿತು ಕೂಡ ವಿವರಣೆಯನ್ನು ಕೊಟ್ಟಿರುವುದಿಲ್ಲ. ಅಲ್ಲದೆ ಪಿರ್ಯಾದುದಾರರ ಮರುಹೇಳಿಕೆಯನ್ನು ಕೂಡ ಪಡೆದುಕೊಂಡಿರುವುದಿಲ್ಲ.

೧೩. ಎದುರುದಾರರ ಪರ ವಕೀಲರು ಈ ಕೆಳಗಿನ ತೀರ್ಪುಜನ್ಯವನ್ನು ಹಾಜರುಪಡಿಸಿರುತ್ತಾರೆ:-

***ILR 2016 KAR 3260 – Pandurang and Others Vs. The State through Police Sub Inspector, Afzalpur Police Station,*** where it held as follows

*"Criminal Procedure Code, 1973 – Section 319 – Power under Section 319 of Cr. P.C., cannot be exercised as a matter of course – The pre-requisite for the exercise of power is similar to the one which is more than a prima facie view – Petitioners were named in the FIR but not charge – Sheeted – Order Passed by the Learned Sessions Judge directing issuance of summons to the petitioners to stand trial - Revision against – Principles to be applied while invoking powers under Section 319 Cr.P.C."*

*Held,*

*Power under Section 319 Cr.P.C., is to be invoked not as a matter of course, but in circumstances where the invocation of such power is imperative to meet the ends of justice. – in matters relating to invocation of power under Section 319 Cr.P.C., the Court is not merely required to take note of the fact that the name of a person who has not been named as an accused in the F.I.R. has surfaced during the trial, but the Court is also required to consider whether such evidence would be sufficient to convict the person being summoned. Since issuance of summons under Section 319 Cr.P.C., entails a de novo trial and a large number of witnesses may have been examined and their re-examination could prejudice the prosecution and delay the trial, the Trial Court has to exercise such discretion with great care and perspicacity."*

*Further Held,*

*"what is the degree of satisfaction required for invoking the power under Section 319 Cr.P.C.?" – The test that has to be applied is one which is more than prima facie case as exercised at the time of framing of charge, but short of satisfaction to an extent that the evidence, if goes unrebutted, would lead to conviction.*

*In the absence of such satisfaction, the Court should refrain from exercising power under Section 319 Cr.P.C. – The petitioners have certainly made out a case for interference. The impugned order is bad in law and is contrary to the guidelines enumerated by the Supreme court.”*

ಮೇಲೆ ಹೇಳಿದಂತಹ ಗೌರವಾನ್ವಿತರ ತೀರ್ಪುಜನ್ಯದಲ್ಲಿದ್ದ ಅಂಶವನ್ನು ಪರಿಗಣಿಸಲಾಗಿದೆ, ಈ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರಧಿಯಲ್ಲಿ ಎದುರುದಾರರ ಹೆಸರು ಇದ್ದು ಹಾಗೂ ಪಿರ್ಯಾದುದಾರರು ಯಾವುದೆ ಮರುಹೇಳಿಕೆಯನ್ನು ಕೂಡ ಕೊಟ್ಟಿರುವುದಿಲ್ಲ, ಪಿರ್ಯಾದುದಾರರು ಸರ್ಕಾರಿ ನೌಕರರಾಗಿದ್ದು ಅವರು ತಮ್ಮ ವಿಚಾರಣೆಯಲ್ಲಿ ಕೂಡ ರೆಡ್ಡಿ ವೈನ್ಸ್ ಮಾಲೀಕರ ಭಾಗಿದಾರಿಕೆಯ ಬಗ್ಗೆ ಕೂಡ ತಿಳಿಸಿರುತ್ತಾರೆ. ಹೀಗಿರುವಾಗ ಚಾಸಾ-೧ ರವರ ಹೇಳಿಕೆ ಮತ್ತು ನಿಪಿ-೧ರ ಅಂಶವನ್ನು ಪರಿಗಣಿಸಿದಾಗ ಈ ಹಂತದಲ್ಲಿ ಡಿ.ಎನ್.ರೆಡ್ಡಪ್ಪ ಬಿನ್ ನಾರಾಯಣಪ್ಪ, ರೆಡ್ಡಿ ವೈನ್ಸ್ ಮಾಲೀಕರು ಇವರನ್ನು ಆರೋಪಿಯನ್ನಾಗಿ ಸೇರಿಸುವುದು ಸೂಕ್ತವೆಂದು ಪರಿಗಣಿಸಿ ಅಂಶ ೧ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

೧೪. ಅಂಶ-೨ :- ಮೇಲ್ಕಂಡ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

ಆದೇಶ

ಅಭಿಯೋಜಕರು ಭಾರತಿಯ ದಂತ ಸಂಹಿತೆ ೩೧೯ರಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಆರೋಪಿ ಡಿ.ಎನ್. ರೆಡ್ಡಪ್ಪ ಬಿನ್ ನಾರಾಯಣಪ್ಪ, ರೆಡ್ಡಿ ವೈನ್ಸ್ ಮಾಲೀಕರು, ತಾಯಲೂರು ಗ್ರಾಮ,

ಮುಳಬಾಗಿಲು ತಾಲ್ಲೂಕು, ಇವರನ್ನು ೨ನೇ ಆರೋಪಿಯನ್ನಾಗಿ ಸೇರಿಸಲು ಆದೇಶ ಮಾಡಲಾಗಿದೆ ಹಾಗೂ ಅವರಿಗೆ ಸಮ್ಮನ್ಸ್ ನೀಡಲು ಆದೇಶಿಸಲಾಗಿದೆ.

(ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಲ್ಯಾಪ್‌ಟಾಪ್ ಮೇಲೆ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ೨೬ನೇ ಫೆಬ್ರವರಿ – ೨೦೨೧ ರಂದು ಉದ್ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಮುಳಬಾಗಿಲು.